ಪುರಾಣಿಕೆಗಾಗಿ

ನೀತಿಮುಕ್ತಾಹಾರಂ

ಕೃಷ್ಣನ ಲೆಂಕ

ಪ್ರಕಾಶಕರು:
ಸ್ಕೂಲ್ ಬುಕ್ ಕಂಪೆನಿ,
(ಶೆಣೈ ಬ್ರದರ್ಸ್ ಕಂಪೆನಿಯ ಪಾಲುಗಾರರಾಗಿದ್ದವರು)
ರಥಬೀದಿ, ಮಂಗಳೂರು.

1937

ಎರಡು ಮಾತು

ತಾಯ್ನುಡಿಯ ಸೇವೆಯನ್ನು ಮಾಡುವುದು ಕರ್ತವ್ಯವಾದುದರಿಂದ 'ಅಳಿಲ ಭಕ್ತಿ ಮಳಲ ಸೇವೆ' ಎಂಬಂತೆ ಈ ಸಣ್ಣ ಕೃತಿಯನ್ನು ರಚಿಸಿರುತ್ತೇನೆ. ಇದರಲ್ಲಿರುವ ಪದ್ಯಗಳ ಬಂಧವು ಮಾತ್ರ ನನ್ನದು, ಭಾವಗಳು ಸಂಸ್ಕೃತ ಕವಿಗಳವಾದುದರಿಂದ ಕೃತಿಯಲ್ಲಿರಬಹುದಾದ ದೋಷಗಳು ಮಾತ್ರ ನನ್ನವಲ್ಲದೆ ಗುಣಗಳು ನನ್ನವಲ್ಲ.

ನನ್ನ ಮೇಲೆ ವಾತ್ಸಲ್ಯದಿಂದ ಅನೇಕ ಹಿತಸೂಚನೆಗಳನ್ನಿತ್ತು ಮುನ್ನುಡಿಯನ್ನೂ ಬರೆದು ನನ್ನನ್ನು ಪ್ರೋತ್ಸಾಹಿಸಿದ ನನ್ನ ಉಪಾಧ್ಯಾಯರಾದ ಮ. ರಾ. ರಾ. ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರನ್ನು ವಂದಿಸುತ್ತೇನೆ. ಮಕ್ಕಳ ತೊದಲು ಹೆತ್ತವರನ್ನು ಸಂತೋಷಪಡಿಸುವಂತೆ ಈ ಕೃತಿಯು ವಿದ್ವಾಂಸರನ್ನು ಆನಂದಗೊಳಿಸಿದರೆ ನಾನು ಕೃತಕೃತ್ಯನಾಗುವೆನು.

ಮಂಗಳೂರು,
ತಾ. 11-3-1937

ಪಾಲೆಪ್ಪಾಡಿ ಗೋಪಾಲಕೃಷ್ಣ.

ಮುನ್ನುಡಿ

ಕನ್ನಡ ಕಾವ್ಯದ ಸ್ವರೂಪಶೈಲಿಗಳಲ್ಲೊಂದು ಬದಲಾವಣೆ ತಲೆದೋರಿದ ಸಮಯವಿದು. ನನ್ನ ಮಿತ್ರರಾದ ಶ್ರೀ. ಪಾಲೆಪ್ಪಾಡಿ ಗೋಪಾಲ ಕೃಷ್ಣಯ್ಯನವರು, ಈ ಸಂದುಗಟ್ಟನಲ್ಲಿಯೂ ಈ 'ನೀತಿಮುಕ್ತಾಹಾರ'ವನ್ನು ಬರೆದುದೆಂದರೆ ಅವರಿಗೆ ಹಳೆಗನ್ನಡದಲ್ಲಿರುವ ಅಕೃತ್ರಿಮ ಭಕ್ತಿಯನ್ನೇ ಸೂಚಿಸುತ್ತಿದೆ. ಇದು ಸ್ವತಂತ್ರವಾದ ಭಾವನೆಯಿಂದೊಡವೆರೆದ ಕೃತಿಯಲ್ಲ; ಅತ್ಯುತ್ತಮಗಳಾದ ಸಂಸ್ಕೃತ ಕೃತಿಗಳಿಂದ ಭಾಷಾಂತರವೆಸಗಿದುದೆಂಬುದನ್ನು ಅವರೇ ಹೇಳುತ್ತಾರೆ. ಕೃತಿಯಲ್ಲಿ ವಿಷಯಸ್ವಾತಂತ್ರ್ಯವಿಲ್ಲವಾದರೂ ಬಂಧಸ್ವಾತಂತ್ರ್ಯವಿದೆಯೆಂಬಲ್ಲಿ ಸಂದೇಹವಿಲ್ಲ. ಮಾತ್ರವಲ್ಲ; ಆ ಬಂಧದಲ್ಲಿ ಸ್ವಾಭಾವಿಕವಾದೊಂದು ಮಾರ್ದವವೂ ಇದೆ. ಕವಿಗಳಿನ್ನೂ ಯುವಕರಾದುದರಿಂದ ಆ ಮಾರ್ದವಕ್ಕೆ, ಮುಂದೆ ನುಣುಪಿಂಪುಹೊಳಪುಗಳೇರಲಿಕ್ಕಿವೆ ಎಂಬುದನ್ನು ಹೇಳಬಲ್ಲೆನು. ಈ ಹೊಸಗಾಲವೆಂದರೆ ಸ್ವಾತಂತ್ರ್ಯದ ಕಾಲ. ಸ್ವಾತಂತ್ರ್ಯಪ್ರಿಯರಾದ ಆಧುನಿಕ ಸಾಹಿತ್ಯ ಸುಧಾರಕರೂ, ಈ ಮಾರ್ಗವನ್ನು ಸೈರಣೆಯಿಂದೀಕ್ಷಿಸುವುದು ಅವರ ಧರ್ಮವಾಗಿದೆ.

ಕವಿಗಳಿಗೊಂದು ಮಾತು. ಹಳೆಗನ್ನಡದ ಬಂಧವು ಹಿಂದಿನದಾದುದರಿಂದ, ಸ್ವಾಭಾವಿಕವಾಗಿ ಸಾಮಾನ್ಯರ ಅವಗಾಹನೆಗೆ ತೊಡಕನ್ನೊದಗಿಸುತ್ತದೆ. ಹಳದಾಗಲಿ ಹೊಸತಾಗಲಿ ಸಾರ್ವಜನಿಕವಾಗುವಂತಿಲ್ಲದಿದ್ದರೆ ಕೃತಿಯು ಎಲ್ಲ ಬಣ್ಣಕ್ಕೂ ಮಸಿಬಳಿದಂತೆಯೇ ಸರಿ ಎಂಬುದನ್ನು ಮರೆಯಬಾರದು. ಅದರಿಂದ, ರೂಢವಾದ, ಅರೂಢವಾಗಿದ್ದರೂ ಸಂಬಂಧದಿಂದ ಕೂಡಲೆ ಅರ್ಥವಾಗುವ, ಅರ್ಥಾನುಗುಣವಾದ ಪದಗಳನ್ನು ಅನ್ವಯವು ವ್ಯಕ್ತವಾಗುವಂತೆ ಹೆಣೆದು ಕೃತಿಯನ್ನು ರಚಿಸಬೇಕೆಂಬುದು ನನ್ನ ಭಾವನೆ. ಇದನ್ನು ಹಳಬರೊಡನೆ ಹೊಸಬರಾದರೂ ಅಲ್ಲಗಳೆಯಲಿಕ್ಕಿಲ್ಲವೆಂದು ತೋರುತ್ತಿದೆ. ಈ ಕೃತಿಯಲ್ಲಿ ಈ ಲಕ್ಷಣಕ್ಕೆಡೆಯೇ ಇಲ್ಲವೆಂದಲ್ಲ; ಇನ್ನೂ

ಎಡೆಮಾಡಬೇಕೆಂದು ನನ್ನ ಸೂಚನೆ. ಮಾತ್ರವಲ್ಲ, ಸರಿಯಾಗಿ ಭಾಷಾಂತರಿಸುವುದೆಂದರೂ ಅದೊಂದು ಕಲೆಯೇ. ಆದರೆ, ಸ್ವತಂತ್ರವಾಗಿ ಬರೆದ ಕಾವ್ಯಗಳ ಸ್ಥಾನವೇ ಬೇರೆ. ಅದರಿಂದ, ಹುರುಪುಳ್ಳ ಯುವಕರಾದ ಕವಿಗಳು ಸ್ವತಂತ್ರವಾದ ಕಾವ್ಯಗಳನ್ನು ಬರೆದು ಕನ್ನಡ ವಾಗ್ದೇವಿಯನ್ನು ಪೂಜಿಸತಕ್ಕುದೆಂದು ಸೂಚಿಸುತ್ತೇನೆ. ಪ್ರಕೃತ ಕಾವ್ಯವೆಂದರೆ ಕವಿಗಳ ಹುಟ್ಟುಗನ್ನಡಿಗತನದ ಒಂದು ಹಾರವೇ ಸರಿ. 'ನೀತಿ + ಮುಕ್ತ + ಅಹಾರ'ದ ಚಿಹ್ನೆಗಳು ಮಾಸಲಿ; 'ನೀತಿ + ಮುಕ್ತಾ + ಹಾರ'ವು ಕನ್ನಡಿಗರ ಎದೆಗೊಳ್ಳಲಿ, ಎಂದು ಪ್ರಾರ್ಥಿಸುತ್ತೇನೆ.

Mangalore,
11 – 3 – 1937.

ಮು. ತಿಮ್ಮಪ್ಪಯ್ಯ.

ನೀತಿಮುಕ್ತಾಹಾರಂ

ಶ್ರೀರಸ್ತು.

ಶ್ರೀ ಶಂಧಾತ್ರೀವಲಯಾ
ಧೀಶಂ ಸದ್ಭಕ್ತವೃಂದಪೋಷಂ ಗುಣಸ
ತ್ಕೋಶಂ ಪಾಲಿಕ್ಕೆ ಹೃಷೀ
ಕೇಶಂ ಮತ್ಕೃತಿಯನೊಲ್ಮೆಯಿಂದಂ ಸತತಂ ೧

ಆವನಕೃಪೆಯಿಂ ಮೂಕನು
ಮಾವಾಚಸ್ಪತಿಯೆನಿಪ್ಪನೈಕಿಲ್ವೆಟ್ಟಂ
ಭಾವಿಸೆಪೆಳವಂ ಲಂಘಿಪ
ನಾವಸುದೇವಾತ್ಮಜಂಗೆ ವಂದಿಪೆನನಿಶಂ ೨

ಶ್ರೀ ವಿಶದವರ್ಣೆ ಶಾರದೆ
ಪಾವನೆಪರಮೇಷ್ಠಿಸತಿ ಸರಸ್ವತಿ ವಿದ್ಯಾ
ದೇವಿಯೆ ಕೂರ್ತೆನ್ನೀ ಮೊಗ
ದಾವರೆಯೊಳ್ ಬಂದು ಸನ್ನಿಹಿತೆಯಕ್ಕೆಂದುಂ ೩

ಕೃತಿವಿದ್ವತ್ಸಭೆಯೊಳ್ಸ
ತ್ಕೃತಿಯೆಂದೆನಿಸುತ್ತೆ ಕಲ್ಪಕಾಲಂಬರಮು
ನ್ನತಿಯಿಂ ನೆಗಳ್ವೊಡೆನಿಚ್ಚಂ
ಹಿತದೆನಗಾಬಿಜ್ಜೆವಳನಚರಣಂ ಶರಣಂ ೪

ಪೊರೆಯೇರ್ವೊಲವಿಂದೆನ್ನಂ
ಕಿರುವರೆಯುದೆ ಮುಡಿಲೊಳಿಟ್ಟು ತಿಳಿಗನ್ನಡಮಂ
ಅರಿಪಿದ ಮಾತೆಯ ಸರಸಿಜ
ಚರಣಂಗಳ್ ಪಾವನಂಗಳಭಿವಂದ್ಯಂಗಳ್ ೫

ಜನಿಯಿಸಿದಂದಿಂ ಕೂರ್ತಾ
ಜನನಿಯೆ ಮೊಲೆಯೂಡಿ ತನ್ನ ಕನ್ನಡವಾಲಂ
ಎನಗುಣಿಸಿದಳಲ್ಲದೆ ಪೆರ
ರಿನಿವಾತಿನ ಸವಿಯುನರಿಪಲಾರ್ಪರೆ ಜಗದೊಳ್? ೬

ಮುದವಿತ್ತೆನಾವನುಡಿಯೊಳ್
ಮೊದಲಮ್ಮಾಯೆಂದು ಜನನಿಗಾನುಡಿಗೆಲಸಂ
ಪದುಳದಿನೊಲ್ದೆನಿತೆನಿತೆಸ
ಗಿದೊಡಂ ಕಿರಿದಲ್ಲದಣುವಿಗಂ ಸರಿದೊರೆಯೇ? ೭

ಕನ್ನಡನಾಡೊಳಗೊಗೆಯಲ್
ಮುನ್ನೆಂತೋ ನೋಂತೆನಂಬ! ಪುಟ್ಟುವೊಡಿನ್ನುಂ
ಕನ್ನಡನಾಡೊಳ್ ಜನಿಯಿಸು
ವೆನ್ನೊಂದೀಮನದಬಯಕೆಯೆಂದುಂ ಸಲಿಸೌ ೮

ಕನ್ನಡದೊಳ್ನುಡಿಯಿಂಪಂ
ಕನ್ನಡನಾಡಲ್ಲಿ ಮಗಮುಗಿಪತನಿಗಂಪಂ
ಕನ್ನಡಿಗರಕೆಳೆದಂಪಂ
ಮುನ್ನಮುದರ್ಂದೊರೆದರೊರೆದರೇ ಪೆರತೊಂದಂ? ೯

ನುಡಿಗುಂ ಮಧುರಸ್ವರಮುಂ
ನುಡಿಸಲ್ಸಂಗೀತನಿಪುಣನಾಬೀಣೆಯುಮಾಂ
ನುಡಿವೆಂ ಮಂಜುಳಕಾವ್ಯಂ
ನುಡಿಸಲ್ ಗೋಪಾಲಬಾಲನೆನ್ನೊಳ್ ಪ್ರಿಯದಿಂ ೧೦

ಕಂದನಮೃದುಕಲಭಾಷಿತ
ದಂದದನಲ್ಗಂದಮುಂದು ಛಂದೊಂಬುಧಿಯೊಳ್
ಸಂದಿರೆಯೆನಗಾಕಂದಂ
ಮುಂದಂಮುಂದಾಕ್ಷರಂಗಳಿಂದಂ ಚೆಂದಂ ೧೧

ಪೊಸತೊಂದಾವುದುತಿರೆಯೊಳ್
ಪೊಸತಾಂ ಮಾಡಿದಪೆನೆಂಬಮಾತೇಂ ಬರಿದೇ
ಪುಸಿಯಾರಯ್ವೊಡೆಪಳೆಯುದೆ
ಪೊಸತೆನಿಕುಂ ರೂಪಭೇದದಿಂದಂ ಪೆರತೇಂ? ೧೨

ಪದಬಂಧವೊಂದಿದೆನ್ನದು
ಪದಭಾವಂ ಪೂರ್ವಸುಕವಿಗಳದದರಿಂದಂ
ಪುದಿದಿರೆಗುಣಮೀಕೃತಿಯೊಳ
ಗದವರ್ತಿಂ ದೋಷಮುಳ್ಳೊಡೆನತುಮೆನಿಸದಂ ೧೩

ಕೃತಿಪತಿಕವಿಯಲ್ಲದೊಡಂ
ಕೃತಿವಿಷಯಂ ಸುಕವಿನೀತಿಮುಕ್ತಾಹಾರಂ
ಕೃತಿಯುಂ ಸಜ್ಜನವೃಂದಂ
ಶ್ರುತಿಹಿತಮೆಸಗುತ್ತೆ ಮೆಚ್ಚಿ ಕೈಕೊಳ್ಗೆಂದುಂ ೧೪

ಪರಮೇಷ್ಠಿ ಬರೆವೊಡೇನಂ
ಬರೆಯೆನ್ನ ವಿಶಾಲಫಣೆಯೊಳಾದೊಡಮೆಂದುಂ
ಅರಸಿಕರೊಳ್ನಲ್ಗಬ್ಬಮ
ನೊರೆವಾದುರ್ಭಾಗ್ಯಮುಂಬರೆಯದಿರ್ದೇವಾ ೧೫

ಸುರಿಯೆಸುಭಾಷಿತರಸಮುಂ
ವರಕವಿಗಳ್ ದ್ರಾಕ್ಷೆಮುತ್ತುದಾ ಶರ್ಕರೆಯು
ರ್ವರೆಯೊಳ್ ಕಲ್ಲಾದುದುಸುಧೆ
ಯಿರದೋಡಿದುದಿಂತು ಸಗ್ಗಕೊಂದಚ್ಚರಿಯೇ? ೧೬

ಆವುದು ದೋಷವಿಹೀನಂ
ಭಾವಿಸೆಗುಣದೆಡೆಯೊಳೊಂದುದೋಷಂತಾನಿ
ರ್ದೇವುದೊ? ಭಾಸುರಶಶಿಕಿರ
ಣಾವಳಿಯೊಳ್ ಪೇಳ್ಮಳುಂಗುತಡಗದೆಕರೆಯೇಂ? ೧೭

ಮನ್ನಿಸುವರೆಲ್ಲಿಪೆಣ್ಗಳ
ಚೆನ್ನನೆದೇವತೆಗಳಲ್ಲಿ ಹರಿಸಂಬಡುವರ್
ಇನ್ನೆಲ್ಲಿ ನಾಡೆಪೆಣ್ಗಳ
ಮನ್ನಿಪುದಿಲ್ಲಲ್ಲಿ ವಿಫಲಮೆಲ್ಲಾ ಕಾರ್ಯಂ ೧೮

ಪರಿಶುದ್ಧೆಯಾದೊಡಂ ಪೆ
ಣ್ಣೆರೆತಂದೆಯುಮನೆಯೊಳಾಜನಂ ಶಂಕಿಸುಗಂ
ತರಿನಿರವೇಳ್ಕುಂ ಸತತಂ
ಹರಿಸದೆಸತ್ಕಾಂತೆ ತನ್ನಗಂಡನಬಳಿಯೊಳ್ ೧೯

ಬರುವನೆಮನೆಯೆಂದೆನಿಕುಮೆ?
ವರಸತಿಮನೆಯಲ್ಲಿರಲ್ಕೆಮನೆಯೆಂದೆನಿಕುಂ
ಪೆರತೇಂ ಸುಗೃಹಿಣಿಯಿಲ್ಲದ
ಪೊರೆತಾಂ ಕಾಂತಾರಮಲ್ತೆ ಕೃಷ್ಣನ ಲೆಂಕಾ? ೨೦

ಅನುದಿನಮುದಾವಮನೆಯೊಳ
ಗಿನಿಸಾನುಂಕಲಹಮಪ್ಪುದಾವಮನೆಯುಂ ಜೀ
ವನಮುಂ ಬಯಸುವಘನಸ
ಜ್ಜನರೆಂದುಂ ದೂರದಿಂದೆ ವರ್ಜಿಸವೇಳ್ಕುಂ ೨೧

ಒರೆವರ್ಗಾವಿಲರೆಂದುಂ
ಪಿರಿದಾವುದೊ ಸಗ್ಗಕೆಂದುನಿರ್ಜರಮಿಳೆಯೊಳ್
ವರಜನನಿಯುತ್ತಣಿಂದಂ
ಪಿರಿದಾವುದೊ ಜನ್ಮಭೂಮಿಯುತ್ತಣಿ ನಿಂತುಂ? ೨೨

ಮರಗಳ್ಪಣ್ಗಳಬಿಣ್ಪಿಂ
ತಿರೆಮುಟ್ಟಂ ಬಾಗುಗುಂ ಘನಂ ಪೊಸನೀರ್ವಿ
ಣ್ಪಿರೆತಗುರ್ಗುಮೆನೆಸಂಪದ
ಮಿರೆಸುಜನರ್ ಬಾಗಿನಿಲ್ವುದೊಂದಚ್ಚರಿಯೇ? ೨೩

ಮಾತೆಯೆಸತ್ಯಂ ಜ್ಞಾನಮೆ
ತಾತಂ ಪೆಂಡತಿಯೆಶಾಂತಿ ದಯೆಯೇಕೆಳೆಯಂ
ಭ್ರಾತನೆಧರ್ಮಂ ಕ್ಷಮೆತನು
ಜಾತನೆಸೈದಂಗೆ ಬಂಧುಗಳ್ ಪೆರರೊಳರೇ? ೨೪

ಪರನಾರಿಯುರಂತಾಯ್ವೊಲ್
ಪರರೈಸಿರಿಯುಂ ಪವಿತ್ರದೈವಸ್ವಂಬೋಲ್
ನಿರುತಂತನ್ನಾತ್ಮಂಬೋ
ಲರಿವನೆ ನರನಕ್ಕುಸರ್ವಭೂತಂಗಳುಮಂ ೨೫

ಪರರಿವರೆಮ್ಮವರಿವರೆಂ
ದೆರಡೆಣಿಸದೆ ಹಿತಮೊಡರ್ಚುವಂತಾನೆನೆಯು
ರ್ವರೆಯೊಳುದಾರಂಗನಿಶಂ
ತಿರೆಯಲ್ಲದೆ ತನ್ನಬಳಗಮಿಂ ಪೆರತುಂಟೇ? ೨೬

ಸಾಧುಗಳೊಡನಕ್ರಮದಿಂ
ವಾದಿಪುದಲ್ತಂತು ವಾದಿಸಲ್ಕಾಮುಸಕಂ
ಸಾಧಿಪರತಿನಿರ್ಮಥನದಿ
ಸಾದಂ ಚಂದನದಿನನಲನೊಗೆಯನೆಪುಗುವಾ? ೨೭

ಶಮೆಯೆಂಬ ಕೈದುಕೈಯುಲಿ
ಸಮೆದಿರೆಮನುಜಂಗೆದುರ್ಜನನಿನೇಂ ಭಯಮೋ?
ವಿಮಲ ಜಲದಿಂದೆ ತುಳುಕುವ
ಕಮಲಾಕರದಲ್ಲಿಬಿಳ್ದ ಶಿಖಿಚುರ್ಚುಗುಮೇ? ೨೮

ಧನಮನೆಬಯಸುವರಧಮರ್
ಧನಮಾನಂಗಳನೆ ಬಯಸುವರ್ಮಧ್ಯಮರೊ
ಲ್ದನಿಶಂಮಾನಮನುತ್ತಮ
ರೆನೆಧೀಮಂತರ್ಗೆ ಮಾನಕಾವುದು ದೊರೆಯೋ? ೨೯

ಒಳವೆನಿತೊಮೋಡಗಳ್ ತಾಂ
ಕೆಲವವರೊಳ್ ಮಳೆಯಿನವನಿಯುಂತಣಿಕುಂ ಮೇಣ್
ಕೆಲವುಂ ಬರಿದೇಗರ್ಜಿಸು
ತಳಿಗುಂ ದಾತಾರನಲ್ಲಿ ಬೇಡಲ್ವೇಳ್ಕೇ? ೩೦

ಆವೆಡೆಯೊಳಿಲ್ಲಮಾನನು
ದಾವೆಡೆಯೊಲವಿಲ್ಲ ನೀತಿಯಿಲ್ಲಾಯೆಡೆಯೊಳ್
ದೇವಾದಿಗಳಿರ್ದೊಡ ಮುಂ
ತಾವರೆಚಣವೊಲ್ದು ಸೈದರೇನಿರ್ದಪರೇ? ೩೧

ವಿರಳಂ ಕದನದೆವೀರರ್
ವಿರಳಂ ಗುಣಮುಳ್ಳರೊಲ್ದು ಸತ್ಕೃತಿಯೆಸಪರ್
ವಿರಳಂ ಬಗೆಯಲ್ಕಿಂತು
ರ್ವರೆಯೊಳ್ ಪರದುಃಖದಿಂದೆಬೇಯ್ವರ್ ವಿರಳಂ ೩೨

ಆರಯೆಸದ್ಗುಣಿಯೆನಿಪನ
ಸಾರೆವರುತ್ತೆಲ್ಲರಿರದೆ ಮನ್ನಿಸಿಪೋಪರ್
ದೂರದಿನೀಕ್ಷಿಸುತಳಿಪರಿ
ವಾರಂ ಕೇದಗೆಯಮೂಸಿಪಾಡದೆ ಸೊಗದಿಂ ೩೩

ಧೀರರ್ಗೆಡರಡಸಲ್ಕಾ
ದೀರರೆತಾಂ ರಕ್ಷಿಸಲ್ಕೆಬಲ್ಲರ್ ನಿತ್ಯಂ
ವಾರಣಮಾಳ್ದಿರೆಕೆಸರೊಳ
ಗಾರಯ್ದೋವಲ್ಕೆ ಬಲ್ಲುದಾಗಜರಾಜಂ ೩೪

ದಿನಪಂಗಂಜಿದತಿಮಿರಮ
ನನಿಶಂ ಗುಹೆಯಲ್ಲಿ ಪೊರೆಗುಮೈಕಿಲ್ವೆಟ್ಟಂ
ಅನುದಿನಮಿಂತಾಗಹನಂ
ಮನಮೊಲ್ದಾನತನನೀಚನೆನ್ನದೆಕಾವಂ ೩೫

ಎರೆದೆರಕೆಗೆಲ್ಲಿಮನ್ನಣೆ
ದೊರೆಯುದೊ ಎಂಬೊಂದುಭಯದಿ ನಿಸ್ವಾರ್ಥದೊಳಂ
ನಿರುತಂ ಮಾಧ್ಯಸ್ಥಿಕೆಯಂ
ಧರಿಪಂಧರೆಯುಲ್ಲಿ ಸಾಧುಕೃಷ್ಣನ ಲೆಂಕಾ ೩೬

ಬಗೆಯುಲ್ಪದೀಪಮುಂ ಮೇಣ್
ಜಗಮಂ ಬೆಳಗಿಸುವತೊಳಪದಿನಕರನುಂ ಪೈ
ದೆಗೆಯಿಸಲಾರದಜವ್ವನ
ಮೊಗೆತರ್ಪಜ್ಞಾನಮೆಂಬಕಳ್ತಲೆಕರಿನಂ ೩೭

ಬೆಕ್ಕಿನತುಪ್ಪಮನಕ್ಷಿಗೆ
ತಕ್ಕಂತೆಯೆಪೂಸೆ ಕಣ್ಣಕುರುಡುಂ ಪೋಕುಂ
ಒಕ್ಕಣಿಸುವೆನೇಂ ಧನಮದ
ದುಕ್ಕುವಕುರುಡಿಂತುಪೋಗದದರಿಂ ಕಷ್ಟಂ ೩೮

ಪೊಗರೇರಿದ ಪೊಸಜವ್ವನ
ಮೊಗುಮಿಗೆಯಿಂದೆರಕಮಾದ ಪುಟ್ಟೈಸಿರಿಯುಂ
ಬಗೆವೊಡಮಾನುಷಬಲಮುಂ
ಸೊಗಸೊಬಗುಂ ತಾನಿವೆಲ್ಲನರ್ಥದಗಡಣಂ ೩೯

ಆಗಮುಜಲದಿಂ ಕರ್ಚು
ತ್ರೇಗಂ ತಿಳಿಯಾಗಿಪಳಿಕಿನಂತಿರ್ದೊಡಮುಂ
ಬೇಗೆಯುಮುದಗಜವಿಳಿದಾ
ಪೂಗೊಳನಂತಕ್ಕುಬುದ್ಧಿ ಯೌವ್ವನಮುಖದೊಳ್ ೪೦

ರಜವಿಡಿದಶುಷ್ಕಪತ್ರ
ವ್ರಜಮುಂ ಸುಳಿಗಾಳಿಬೀಸಿತಿರಿಯಿಪತೆರದಿಂ
ರಜದಿಂ ಭ್ರಾಂತಿಯನೊಂದಿದ
ಕುಜನನನಾಪ್ರಕೃತಿಯಿಹದೆ ತಿರ್ರುನೆತಿರಿಕುಂ ೪೧

ಬಳಿಕಂ ವಿಷಯದೆನೂಂಕು
ತ್ತುಳಿಪವರೊಳ್ ವರ್ಧಿಸುತ್ತೆ ದುರ್ಮಾರ್ಗದೆತಾಂ
ತಳರಿಸಿದಿಜ್ಞ್ಮಾಥಂಬೊಲ್
ಮಿಳಿಮಿಳಿಸುಗಮಂತೆನಾಶಿಕುಂ ಸರ್ವಮುಮಂ ೪೨

ಧನಮುಳ್ಳಂಗೀತಿರೆಯೊಳ್
ಜನರಾರುಂ ಭಯದೆನುಡಿಯರೊಂದುತ್ತರಮಂ
ಧನಿಕಂ ಪೇಳ್ದುದನೆನಿತುಮ
ನನಿತುಮನೊಲ್ಪಿಲ್ಲರಿರದೆ ಸೈಸೈಯೆಂಬರ್ ೪೩

ಸಿರಿಪೆರೆಯಿಂದಂ ಕೊಂಕಂ
ಗರದಿಂ ಮೋಹನಮುಮಂ ಮದಂ ಮದಿರದಿನಾ
ದರದಿಂದುಚ್ಚೈಃಶ್ರವದಿಂ
ತರಳತೆಯುಂ ಕೂಡಿ ಬಂದಳಿಂಗಡಲಿಂದಂ ೪೪

ಇಂಗಡಲಣುಗಿಗೆಸತತಂ
ಸಂಗಡಿಸಿದನೇಹದಿಂದೆ ಕೌಸ್ತುಭಮಣಿಯೊಳ್
ಸಂಗದಿನಚ್ಚರಸಿಯರೊಳ್
ಸಂಗಡಿಸದೆಕಠಿಣತೆಯು ಮಹಹಲೋಭಮುಮೇಂ? ೪೫

ಸೊಡರ್ಗುಡಿಚಾಂಚಲ್ಯದಿನಾ
ಕಡುವೊಗೆಯುಂ ಕಾರುವಂತೆ ಸಿರಿತನಗುರೆ ಬಂ
ದಡಸಿದಚಾಂಚಲ್ಯದೆನೋ
ಳ್ಪೊಡೆಯುಗುಳ್ವಳ್ ಕೇಡಸೂಡಸೋಡಂಬಾಡಂ ೪೬

ಆಶಾವಿಷಲತೆಯುಂ ಸಲೆ
ಪೋಷಿಪ ಜಲಧಾರೆಬಳಿಕ ನಿರ್ಮಲಚರಿತಂ
ಮಾಸುವಪೊಗೆಯಿಂದ್ರಿಯಮೃಗ
ಕಾಸುರದಾವ್ಯಾಧಗಾನಮಿಾಸಿರಿನಿಸದಂ ೪೭

ದೋಷಾಹಿಸಂಕುಲಕ್ಕಾ
ವಾಸಂ ಸದ್ಗುಣವಿಶೇಷಕಲಹಂಸಕ್ಕು
ದ್ವಾಸಿಪಕಾಲದವುಳಿಸುವಿ
ಲಾಸದಪಾಸಲ್ತೆ ಸಿರಿಮುಹಾಜ್ಞಾನಕೆ ತಾಂ ೪೮

ಅರನೆಂಬ ಪೂರ್ಣಚಂದ್ರನ
ನುರೆನುಂಗುವ ಘೋರರಾಹುಜಿಹ್ವೆ ಬಳಿಕ್ಕಂ
ನಿರುತಂ ಪ್ರಸ್ತಾವನೆಯೀ
ಧರೆಯೊಳ್ ದುಷ್ಕಪಟನಾಟಕಕ್ಕೈಶ್ವರ್ಯಂ ೪೯

ಸಿರಿಚಲಿಯಿಸುವಳ್ ತನ್ನೊಂ
ದಿರವಿಂದಂ ಚಿತ್ರಲಿಖಿತಪುತ್ರಿಕೆಯುನೆನಲ್
ತಿರೆಯೊಳ್ ಸಿರಿಗಂಡಕಳೇ
ವರಮುಂ ಬಾಯ್ವಿಡುಗುವೆಂಬನುಡಿತಪ್ಪುಗುವೇ? ೫೦

ಶ್ರುತಿಸಂಪನ್ನಂ ಸಂಶಯು
ಮತಿಯೆನಿಪಂ ದೀರ್ಘದರ್ಶಿಬಂಚಿಸೆಪಡುವಂ
ಸತತಂ ಸಿರಿಯಿಂದಹಿತಕೆ
ವಿತತಾಶ್ರಯದಾತನೆನಿಪನೊಳ್ವಾನಿಸನುಂ ೫೧

ಸಮುನಿಸಿದ್ಧೈಸಿರಿಯುಂತಾ
ನಮುವೂ! ನರನಾದವಂಗೆಕಾವುದುಕಷ್ಟಂ
ಗಮನಿಸದೆ ಪೊಂದಿಪೋಕುಂ
ಸಮುಕಟ್ಟಂ ಪಡೆದೊಡಂ ಗುಣಪ್ರಗ್ರಹದಿಂ ೫೨

ಕೆಳೆಯುಂ ಪುದುವಂ ನಡೆಯುಂ
ಕುಲಮುಂ ಸನ್ಮತಿಯುನಂತೆಯುರನಂ ಶಾಸ್ತ್ರಾ
ವಳಿಯುಂ ದಾನಮುನಿಂತುರೆ
ಯೆಳಸದೆತಾಂ ಮಿಂಚಿನಂತೆಪಾರ್ಗ್ಗುಂ ವಿತ್ತಂ ೫೩

ಮಂದರಶೈಲಭ್ರಮಣದಿ
ನಂದಾಸಂಸ್ಕೃತಿಯನೊಂದಿದುದರಿಂದಿಂದಾ
ಯಿಂದಿರೆಸರಸಿಜಮಂದಿರೆ
ಯೆಂದುಂ ಭೂತಲದೆಸುಳಿದುಬಟ್ಟನೆಬರ್ಪಳ್ ೫೪

ಸತತಂ ಸಿರಿವಿದ್ಯಾಪರಿ
ಣತನಂ ಮಚ್ಚರದೆನೋಡಳಾಸದ್ಗುಣಿಯಂ
ಪತಿತಂ ಬೊಲೊಲ್ದುಬೆರೆಯುಳ್
ಹಿತಮಂ ಸಾಧಿಸಳುದಾರನೊಳ್ ಖಲನೆನುತುಂ ೫೫

ಸುಜನಂ ನೋಳ್ಪೊಡೆನಿಷ್ಪ್ರಯೋಜಕನೆನುತ್ತುಂ ವರ್ಜಿಪಳ್ ಸತ್ಕುಲೀ
ನಜನಂ ಪಾವನೆದಾಂಟುವಂತೆನೆಗೆವಳ್ ಶೂರೇಂದ್ರನಂ ನಿಂದಿಪಳ್
ಋಜುವಿಂದಾತನಜಾನಿಸಳ್ ಕಿನಿಸಿನಿಂದುಸ್ವಪ್ನದಂತಾಗುಣ
ವ್ರಜಮಂ ಕೇಡುಗಳೆಂದುನಾಡೆತೆಗಳ್ವಳ್ ಶ್ರೀಕಾಂತೆಯೆಂದುಂ ದಿಟಂ

ಧನಮತ್ತನಸ್ವಭಾವಂ
ಕಿನಿಸಿನಹಂಕಾರಮೆಂಬದಾಹಜ್ವರದಾ
ಘನತರಮೂರ್ಛೆಗೆಸಂದಿರ
ಲಿನಿಸಾನುಂ ಸದ್ವಿವೇಕಮೇಂ ನೆಲಸುಗುಮೇ? ೫೭

ಅರೆದೆರೆದಕೇಕರಂಗಳಿ
ನಿರದವಲೋಕಿಸುತೆ ಬಯ್ದುಮದಶುಂಡಾಲಂ
ಮೊರಕಿಮಲೆವವೋಲ್ ದುಗುಡಕೆ
ಗುರಿಯೆನಿಪಂ ವಿತ್ತಮತ್ತನುಪದೇಶಕನಂ ೫೮

ಧನಮತ್ತರಕಿವಿವಾಗಿಲ್
ದಿನದಿನಮಾಗರ್ವಮೆಂಬಮೇಣ್ ದಪ್ಪಮುಮೆಂ
ಬನಿತೊಂದುಬೀಗಿಗೆಡೆಯೆನೆ
ಘನತರಗುರುವಚನಮದರೊಳೆಂತೊಳವುಗುಗುಂ ೫೯

ಜೊನ್ನಂ ಪಳಿಕಂ ಪುಗುವಂ
ತಿನ್ನಿಳೆಯೊಳ್ ಹಿತದಗುರುವಚಂಗಳ್ ಪುಗುಗುಂ
ಸನ್ನುತರೊಳ್ಗಿವಿದೆರೆಯುಂ
ಚೆನ್ನನೆಋಜುಮಾರ್ಗದಿಂದವಿತಥಂ ಸತತಂ ೬೦

ತದ್ಗುರುವಚನಾವಳಿಯಾ
ಸದ್ಗುಣವುಳ್ಳರ್ಗೆವದನಭೂಷಣಮಕ್ಕುಂ
ಉದ್ಗಳಿತಮದದೆಶೋಭಿಪ
ಸದ್ಗಜವಕ್ತ್ರಕ್ಕೆ ಶಂಖಮೊಪ್ಪುವಪಾಂಗಿಂ ೬೧

ಸಂಜೆಯ ತುಂಬುಂಬೆರೆತಾ
ನಂಜನವುಡಿಯುಂತೆ ಮುಷ್ಟಿಗೊದಗುವತಮಮಂ
ಭಂಜಿಸುಗುಮಿಂತುದುರ್ಗ್ಗುಣ
ಪುಂಜಂಗಳನಾಗುರೂಪದೇಶಂ ತೊಡೆಗುಂ ೬೨

ತಿಳಿನೀರಾದೊಡೆಯುಂ ಕಿವಿ
ಯೊಳವೊಗಲ್ ಶೂಲೆಯನ್ನೊಡರ್ಚದೆ ಕುಜನಾ
ವಳಿಕರ್ಣರಂಧ್ರಮುಂಪುಗೆ
ವಿಳಸದ್ಗುರುವಚನಮೇನೊಡರ್ಚದೆನೆನೋವಂ? ೬೩

ಹೊಟ್ಟೆಗೆ ಕುಟ್ಟೆಯುಗೇರ್ದಂ
ಬಿಟ್ಟುಂಡಂಗೆಂತು? ಪಾಲಿನಿಯದಾವಿಷಯುಂ
ಕೊಟ್ಟಾಸವಿಯುಂಡಂಗೇಂ
ನೆಟ್ಟನೆಗುರುವಚನಮೆಂತು ಹಿತಮೆಂದೆನಿಕುಂ? ೬೪

ಪೂಸರಲಹೊಡೆತದಿಂದಂ
ಕಾಸಿದಪುಳಿಲಂತೆ ಬೆಂದುಪುಡಿಪುಡಿಯಾದಾ
ಮೋಸದ ಮನುಜನಹೃದಯಕೆ
ಸೂಸಿದೊಡೇವುದೊ ಪವಿತ್ರಗುರುವಚನಜಲಂ? ೬೫

ಜಲರಹಿತಸ್ನಾನಂ ನರೆ
ಯಿಲಿ ಜರೆಯಿಲಿಯಂತೆ ಕಣ್ಣಮುಬ್ಬಿಲಿ ಮುಪ್ಪಾ
ವಿಳಸದ್ಗುರುವಚನಾವಳಿ
ಯಿಳೆಯೊಳ್ ಸುಜನರ್ಗೆ ಕಿವಿಗೆಮಣಿಯಿಲಿದೊಡವುಂ ೬೬

ಧರೆಯೊಳ್ಸಮಸ್ತಜಂತುನಿ
ಕರದೊಳ್ ಪಸಿವಾಸರೊರಕುಸಮಮಿರ್ದೊಡಮುಂ
ವರವಿದ್ಯೆಯಿರ್ಪಬಲ್ಪಿಂ
ನರನಗ್ರಣಿಯೆನಿಸಿ ನೆಗಳ್ವನಲ್ಲದೊಡೆಂತೋ? ೬೭

ಹರಿಸಕೆದೊರೆಯೆನಿಪಸೊಗಂ
ಪೆರತಾವುದೊ ಶಾಂತಿಗೆಣೆಯತಪಮಾವುದೊ ಪೇಳ್
ವರವಿದ್ಯೆಗೆ ಪಡಿಯೆನಿಪುದು
ಪೆರತಾವುದೊ ಮಾನಸಂಗೆ ಕೃಷ್ಣನ ಲಿಂಕಾ? ೬೮

ತರುಲತೆಗಾಶ್ರಯಮಬಲೆಗೆ
ಪುರುಷಂ ಮೇಣ್ ಪಂಡಿತಂಗೆ ನೃಪನಾಶ್ರಯಮು
ರ್ವರೆಯೊಳ್ ಸ್ತ್ರೀಯುಂ ಲತೆಯುಂ
ವರಪಂಡಿತನುಂ ನಿರಾಶ್ರಯದೆ ಶೋಭಿಪರೇ? ೬೯

ವರವಿದ್ಯೆ ಕೂರ್ತುನೆಲೆಗೊಂ
ಡಿರೆಧರೆಯೊಳ್ ಮಾನವಂಗುದರಪೋಷಣೆಗೇಂ?
ಮರುಕವೆ? ಗಿಳಿಯುಂ ಕೂಳಂ
ದೊರೆವಡೆಗುಂ 'ರಾಮರಾಮ' ಎಂಬುದರಿಂದಂ ೭೦

ವರಕುಲದೆ ಪುಟ್ಟುತುಂ ನಲ್
ವರಿಜಾಂತುಂ ಪೊಗರಜವ್ವನಂದಳೆಯುತ್ತುಂ
ವರವಿದ್ಯೆಯೊಂದದಿರ್ದೊಡೆ
ನರನಿರ್ಕೆಯೆ ವಿಫಲಮಲ್ತೆ? ಮುತ್ತುಗವೂವೊಲ್ ೭೧

ಪಿರಿದೆಂಬರನ್ನದಾನವ
ನಿತನವರದರಿಂದೆ ಪಿರಿದು ವಿದ್ಯಾದಾನಂ
ಪರಿತೋಷಮನ್ನದಿಂದೊಂ
ದರೆದಿನಮಾಬಿಜ್ಜೆಯಿಂದ ಮುಸುವಿರ್ಪನ್ನಂ ೭೨

ಜ್ಞಾನಮಣಿವಡೆದುತಿರೆಯೊಳ್
ಮಾನವಸಂಕುಲಕೆ ಬಯಸಿ ತನ್ನೊಂದೊಲವಿಂ
ದಾನಲ್ವಣಿಗದಿರಂಬೀ
ದಾರ್ನಂದಮುನೀವನಿಹದೆ ದೇವನೆ ದಿಟದಿಂ ೭೩

ಮರಮುಂತನ್ನಿನಿವಣ್ಣಂ
ಪೆರಗೀರ್ವುದೆನಲ್ಕೆ ಪಲವುಶಾಸ್ತ್ರಂಗಳಿನಿಂ
ತರಿತು ತಿಳಿವೆಂಬ ಪಣ್ಣಂ
ಪೆರಗೊರ್ಲಿದೀಯುದನನೆಂತು ಮಾನಸನೆಂಬರ್? ೭೪

ಸೊಗಮಂ ಬಯಸುವಗೆಂದುಂ
ಬಗೆಗೊಳದಾವಿದ್ಯೆ ವಿದ್ಯೆಯುಂ ಬಗೆನಂಗಾ
ಸೊಗವೊಗೆಯದುತಾಂ ವಿದ್ಯಾ
ರ್ಥಿಗಲಭ್ಯಂ ಸೌಖ್ಯಮರಿವು ಸೌಖ್ಯಾರ್ಥಿಗೆ ಪೇಳ್ ೭೫

ಸುಜನರ ಪರಿಪಾಲನೆಯುಂ
ಕುಜನ ಪ್ರತಿಷೇಧಮುಂ ಧುರಾಂಗಣದಹಿತ
ವ್ರಜಮಂ ತತ್ತರಿವುದು ಭೂ
ಭುಜರ್ಗಿಳೆಯೊಳ್ ಪರಮಧರ್ಮವೆಂಬರ್ ಸೈದರ್ ೭೬

ಪ್ರಜೆಯಸೊಗಂ ತನ್ನಸೊಗಂ
ಪ್ರಜೆಗಳಹಿತಮಾವುದದುವೆ ತನಗೆಹಿತಂ ಪೇಳ್
ಪ್ರಜೆಗಳ್ಗದಾವುದಿಷ್ಟಂ
ನಿಜೇಷ್ಟವೆಂದಿರದೆ ಬಗೆವರಾಜನೆ ರಾಜಂ ೭೭

ಸ್ವಸುಖಾಭಿಲಾಷೆಯಂ ತೊರೆ
ದಸುವುಳ್ಳನ್ನೆವರಮವನಿಯಂ ಪೊರೆವನೆತಾಂ
ವಸುಧಾಧೀಶಂ ವೃಕ್ಷಂ
ಬಿಸಿಲಂಪೊತ್ತಾಶ್ರಿತರ್ಗೆ ನೆಳಲೀಯದೆ ಪೇಳ್? ೭೮

ಪೊಡವಿಯನಾಳ್ವಧಿಕಾರಂ
ಬಡೆದಂಗೊಗೆತರ್ಪಸೊಗಕೆ ಪಡಿಯಿಲ್ಲೆಂಬರ್
ಎಡಗರ್ ತತ್ಸುಖವಿಹದೊಳ್
ಕೊಡೆಯಿಂ ಬಿಸಿಲಲ್ಲಿ ಪಡೆದ ನೆಳಲಂತಲ್ತೇ? ೭೯

ನಾಲಗೆದುದಿಸಿರಿದಾಯ್ವನೆ
ನಾಲಗೆದುದಿಮಿತ್ರಬಾಂಧವರ ನುಸೆಬಳಿಕಂ
ನಾಲಗೆದುದಿಯೊಳ್ ಬಂಧಂ
ನಾಲಗೆದುದಿಯಲ್ಲಿ ಮೃತ್ಯುವೆಂಬರ್ ಬಲ್ಲರ್ ೮೦

ನುಡಿವೊಡೆಚಿಂತಿಸಿನುಡಿವುದು
ನುಡಿದರ್ ಪೆರರೆಂದುನುಡಿವುದೇಂ ಸಲ್ಲುವೆಪೇಳ್?
ನುಡಿಯಂ ಬಂಧನಮಾಯ್ತಾ
ನುಡಿಗಲ್ತುದರಿಂದೆ ಗಿಳಿಗೆ ಕೃಷ್ಣನ ಲೆಂಕಾ ೮೧

ಧರೆಯೊಳ್ಸಮಸ್ತ ಜಂತುನಿ
ಕರಮುಂನಲ್ವಾತಿನಿಂದೆ ಹರಿಸಂಬಡೆಗುಂ
ನಿರುತಂ ಹಿತವಚನಂಗಳ
ನೊರೆಕೃಷ್ಣನಲೆಂಕಮಾತಿಗಂ ಬಡತನಮೇಂ? ೮೨

ಕುಡತಕ್ಕುದಿಲ್ಲ ಕೆಯ್ಯಿಂ
ಕುಡವೇಡಿದುದಿಲ್ಲ ಮನೆಯಿನಾದೊಡಮೇಕೋ
ನುಡಿಯರ್ಕೆಲಂಬರಾನಲ್
ನುಡಿಯಂ ಪರಹಿತಕೆಮಾತಿಗಂ ಬಡತನಮೇಂ? ೮೩

ಬಡತನಮುದಾನದೋಷದಿ
ನಡಸುಗುಮಾಬಡತನಮಿರೆಪಾಪಂ ಗೈವಂ
ಬಿಡದಾ ಪಾಪದಫಲದಿಂ
ಬಡವುಟ್ಟದರಿಂದೆ ತಿರಿಗಿಪಾಪಿಯೆ ಮನುಜಂ ೮೪

ತೋರಲ್ ನೂರ್ವರೊಳೊರ್ವಂ
ಶೂರಂ ಸಾಸಿರ್ವರಲ್ಲಿ ಪಂಡಿತನೊರ್ವಂ
ತೋರೆಪಯಿಂ ಛಾಸಿರ್ವರೊ
ಳೋರಂತಾ ವಾಗ್ಮಿತಾನುದಾರಂ ತೋರಂ ೮೫

ಪಲ್ಲವದೆಡೆ ಕಂಗೊಳಿಸುವ
ಮಲ್ಲಿಗೆಯಂತೆಸೆವಪಲ್ಲತೊಳಗಿಸಿ ತೊದಲಂ
ಸೊಲ್ಲಿಪಕಂದನ ಮೊಗದಿಂ
ಸಲ್ಲಲಿತಮೆನಿಪ್ಪದುಂಟೆ ಪೆರತೊಂದಿಳೆಯೊಳ್ ೮೬

ಕುಡಿಗಂಗಳಿಂದೆ ನೋಡುತೆ
ಪಡೆದವನಂ ಸೊಗದೆನುಂದಮುಂದಾಕ್ಷರಮಂ
ನುಡಿವಣುಗನತಳ್ಕೈಸಲ್
ಪಡೆವೊಂದಾನಂದಕಾವುದಿಹದೊಳ್ ದೊರೆಯೋ? ೮೭

ವರಗುಣಯುತನೆನಿಪನುಗಂ
ನರಗೊರ್ವನೆಸಾಕುಮೂರ್ಖರಿಂ ನೂರ್ವರಿನೇಂ?
ಪರಿವಂ ಮರ್ಬಂತುಂಬುಂ
ಬೆರೆಯೊರ್ವನೆನೆರೆದ ಮಿಕ್ಕತಾರಾಳಿಯಿನೇಂ? ೮೮

ಪರರೆಸಗಿರ್ದುಪಕೃತಿಯುಂ
ಮರೆತಪಕಾರಂಗಳೆಸಗಿ ಸುಖಿಸುವನರನೇಂ?
ನರನೇ? ನರನಲ್ಲಾತಂ
ನರರೂಪದೆ ತಿರೆಯುಮೇಲೆ ಚರಿಸುವಬಗ್ಗಂ ೮೯

ಖಳರ್ಗೆಸಗಿರ್ದುಪಕೃತಿಯಿಂ
ದಿಳೆಯೊಳ್ ದುಷ್ಕಾರ್ಯಮಕ್ಕುಮಪಕೃತಿಯುಕ್ಕುಂ
ತಿಳಿ! ಯಮೃತಸದೃಶಮೆನಿಪಾ
ಕಳಪಾಲಿಂ ನಂಜುಪಾವಿಗೇರುಗುಮಲ್ತೇ? ೯೦

ಸತತಂ ಗುಣಗಣದೆಡೆಯೊಳ
ಹಿತದಿಂ ದೋಷಮನೆಕಂಡು ಬಲ್ವಿಡಿವಿಡಿಯು
ತ್ತತಿಶಯದಿಂ ತೋರ್ಪರ್ಗಂ ನರ
ತತಿಯೊಳ್ ಕಣ್ಣಿರ್ದುನೋಡಿಯುಂ ನೋಡುವನೇಂ? ೯೧

ಘನತರ ಚಂದನಮೇಂತ
ಣ್ಪೆನೆ ಚಂದನದಲ್ಲಿ ಪುಟ್ಟುವಾಕಿರ್ಚುಂ ಚಂ
ದನದಂತೆ ತಣ್ಪೆ? ಕಿರ್ಚಂ
ತಣಿಸುವವಾರಾಶಿಯುಲ್ಲಿ ಬಾಡಬನಿರನೇ? ೯೨

ಅನಿಶಂ ಸಜ್ಜನವೃಂದಕೆ
ಮನದೊಳ್ ಮೇಣ್ ವಚದೆಕಜ್ಜದಲ್ಲಿಯುಮೊಂದುಂ
ಮನದೊಂದುಂ ನುಡಿಯುವವಾ
ತಿನೊಳೊಂದುಂ ಕಜ್ಜದೊಂದುದುಷ್ಟರ್ಗಿಳೆಯೊಳ್ ೯೩

ಒಲವುಂ ಸೇರ್ಕೆಯುಮೀಭೂ
ತಲದೊಳ್ ಸಮನಿಪೊಡೆ ಬಾಹ್ಯಕಾರಣಮುಂಟೇ?
ಜಲಜಂ ದಿನಕರದರ್ಶನ
ದಲರ್ಚುಗುಂ ದ್ರವಿಕುಮಂತೆಬಿದುನಿಂ ಬಿಮುಗಲ್ ೯೪

ಸೊಗದುಗುಡಂಗಳ್ ಜೀವನ
ದೊಗೆತರ್ಕುಂ ಸರದಿಯಿಂದ ಮಾವನನೆಂದುಂ
ಸೊಗಮುಂ ದುಗುಡಮುಮಿಳೆಯೊಳ್
ಬಗೆವೊಡೆವೊಂದೊಂದೆ ಪೊರ್ದವೆಂಬರ್ ಪಿರಿಯರ್ ೯೫

ಸುಖದುಃಖದಿಂದೆ ತೀವಿದ
ಸಕಲಾವನಿಯಲ್ಲಿ ದುಃಖಮಧ್ಯದೆ ಸೌಖ್ಯಂ
ಸುಖಮಧ್ಯದಲ್ಲಿ ದುಃಖಂ
ಸಕಲಜನಕ್ಕಿರ್ಕುಮೆಂದು ಪೇಳ್ವರ್ ಧೀರರ್ ೯೬

ಕುಮತಿಗಳೆಂದುಂ ಬೇಡುವ
ರಮಮಾ! ಧನಿಕರ್ಕಳಲ್ಲಿ ದೈನ್ಯದಿನೆಂದುಂ
ವಿಮಲಜಲಮಿರ್ದು ಕೈಯ
ಲ್ಲಿ ಮಹಾಘನವಾರಿಗೆಳಸಿ ಬೇಡುವಪಾಂಗಿಂ ೯೭

ಪರಿವರ್ತಿಪಸಂಸಾರದೆ
ಮರಣಂಬೊರ್ದುತ್ತೆ ಬಳಿಕಪುಟ್ಟದನಾವಂ?
ತಿರೆಯೊಳಗಾವಂ ಪುಟ್ಟದು
ದರಿಂದೆ ಬೆಳಗುಗುಮೊವಂಶಮನೊಗೆತಂದಂ ೯೮

ನರಗೆ ವಸನಮುಂ ವಪುವುಂ
ವರವಾಕ್ಯಂ ವಿದ್ಯೆಯುಂ ವಿನಯಮುಂ ತರ್ಕಂ
ಗುರುತರಗೌರವಮಿವರಿಂ
ಪರಿವರ್ಜಿತನಾದವಂಗೆ ಗೌರವಮುಂಟೇ? ೯೯

ಆಸೆಗೆ ದಾಸನೆನಿಪ್ಪಂ
ದಾಸನೆ ದಿಟಮಕ್ಕು ಸರ್ವವಿಷಯಂಗಳ್ಗಾ
ಆಸೆಯದಾವಂ ಗಿಳೆಯೊಳ್
ದಾಸನವಂಗಕ್ಕು ವಿಷಯಮೆಲ್ಲಾ ದಾಸಂ ೧೦೦

ವಾರಣಮಂಕುಶದಿಂದಂ
ವಾರುವಮುರೆವಾಘೆಯಿಂದೆ ಸೇವಕನಾದಂ
ಧಾರಾಳಮೊಪ್ಪಣದಿಂ
ನಾರೀಜನಮಿಂತು ಹೃದಯದಿಂ ವಶಮಕ್ಕುಂ ೧೦೧

ಹೀನಾಶ್ರಯಮಂ ಬಯಸುವ
ದೀನಾನುಂತಗದು ಬಯಸಿ ಮಹದಾಶ್ರಯಮಂ
ತಾನೊಂದಿಬಾಳ್ಗೆ ಮಾನವ
ನಾನೀರ್ಶುಕ್ತಿಯೊಳುರುಳ್ದು ಮುತ್ತೆನಿಸದೆ ಪೇಳ್ ೧೦೨

ಧೀರಂಗಾವುದೊ ಭಾರಂ
ದೂರಂ ವ್ಯವಸಾಯಿಗಾವುದೋ ವರವಿದ್ಯಾ
ಧಾರಂಗಾವುದೊ ಪರವೂರ್
ಕೂರದನಾವನೊಬಳಿಕ್ಕೆನಲ್ವಾತುಗನಂ? ೧೦೩

ಆಧಿವ್ಯಾಧಿಗಳಿಂದಂ
ಬಾಧಿತನಾಗದವನಾವನವನೀತಲದೊಳ್
ಸಾಧಿಸಿನಡೆವೆಡೆಯೆಡವದೆ
ಪೋದವನಾವಂ? ನಿರಂತರಂ ಸುಖಿಯಾವಂ? ೧೦೪

ಅಭಿಮಾನಮಾರ್ಗೆಧನಮವ
ರಭಿವಂದ್ಯರ್ ಜೀವಿಪರ್ ಚಿರಂಗತಿಸಿದೊಡಂ
ಅಭಿಮಾನರಹಿತರೊಡಲೊಳ
ಗಭಯದಿನಸುವಿರ್ದೊಡಂ ಮೃತರೆದಿಟಮವರ್ಗಳ್ ೧೦೫

ವಿತ್ತಮುದಾರಂಗೊಣಪುಲ್
ಮಿತ್ರಾಶೂರಂಗೆ ಪುಲ್ತ್ರೊಳಪ ಜವ್ವನದಾ
ಮತ್ತ ಗಜಯಾನೆಯುಂಪುಲ್
ಮತ್ತೆ ವಿರಕ್ತಂಗೆ ನಿಸ್ಪೃಹಂಗೆ ಜಗಂಪುಲ್ ೧೦೬

ನೆಲಸಿರೆಕಡುಪೊಡಲೊಳ್ ಸ
ತ್ಕುಲಪ್ರಸೂತಂ ಬಳಿಕ್ಕಶಾಸ್ತ್ರಜ್ಞಾನಂ
ಪಲವುಂ ಗ್ರಂಥಾಲೋಕಮು
ಮುಲಿಕೃಷ್ಣನಲೆಂಕ ಫಣಿಫಣಾಮಣಿಯಲ್ತೇ? ೧೦೭

ಪರಗೊರ್ರೆವೆಡೆಯೊಳ್ ತಿರೆಯೊಳ್
ನರರೆಲ್ಲರ್ ಪರಮುಪಂಡಿತರ್ ನೀತಿಯನಂ
ತಿರದಾಚರಿಪೆಡೆಯೊಳ್ಮನಿ
ವರರುಂ ಪಂಡಿತರೆ ಪೇಳ ಕೃಷ್ಣನ ಲೆಂಕಾ ೧೦೮

ಶ್ರುತಿದೇವಿಸೇವೆಯೆಸಗುವ
ಹಿತಕಾರ್ಯದೊಳಳ್ತಿವೆತ್ತು ಪರಿವರ್ತಿಸಿದಂ
ನುತಸಂಸ್ಕೃತದಿಂದಾಯ್ದುಂ
ಹಿತವಚಮುಂ ತನ್ನನುಡಿಗೆ ಕೃಷ್ಣನ ಲೆಂಕಂ ೧೦೯

ಕನ್ನಡದಾಯೆಳಗೂಸಂ
ಮನ್ನಿಸಿತೊದಲಲ್ಲಿ ದೋಷಮುಳ್ಳೊಡೆತಿದುರ್
ತ್ತುನ್ನತಿಗೆ ತರ್ಪಪುಣ್ಯಂ
ಕನ್ನಡದಗ್ರಣಿಗಳೆನಿಪ ಸೈದರ್ಗಲ್ತೇ? ೧೧೦

ಆವನ ಮಹಿಮೆಗೆ ವಿಶ್ವಂ
ತೀವಲ್ಕಣುವತ್ತಣಿಂದೆ ಕಿರಿದೆಂದೆನಿಕುಂ
ಆವಾಸುದೇವನೊಲ್ಮೆಯಿ
ನೋವುಗೆ ಗೋಪಾಲಬಾಲನೆಮ್ಮಂ ಶುಭದಂ ೧೧೧

ನೀತಿಮುಕ್ತಾಹಾರಂ

ಲಘು ಟಿಪ್ಪಣಿ

---

೧. ಪಾಲಿಕ್ಕೆ = ರಕ್ಷಿಸಲಿ. ಒಲ್ಮೆ = ಪ್ರೀತಿ.

೨. ಐಕಿಲ್ವೆಟ್ಟಂ(ಐಕಿಲ್ + ಬೆಟ್ಟಂ) = ಹಿಮಗಿರಿಯನ್ನು. ಪೆಳವಂ = ಕಾಲಿಲ್ಲದವನು. ಅನಿಶಂ = ಸದಾ.

೩. ವಿಶದವರ್ಣೆ = ಶುಭ್ರವಾದ ಬಣ್ಣವುಳ್ಳವಳು. ಕೂರ್ತು = ವಾತ್ಸಲ್ಯದಿಂದ.

೪. ನೆಗಳ್ವೊಡೆ = ಪ್ರಸಿದ್ಧಿಯನ್ನು ಹೊಂದಲು. ನಿಚ್ಚಂ = ನಿತ್ಯವೂ. ಬಿಜ್ಜೆವಳ = ವೇದಗ್ರಾಹಿಯಾದ ಗಣಪತಿ.

೫. ಪೊರೆಯೇರ್ವ = ವೃದ್ಧಿಯಾಗುವ.

೬. ಇನಿವಾತು = ಪ್ರಿಯವಾದ ಕನ್ನಡ ನುಡಿ.

೭. ಸರಿದೊರೆಯೇ = ಸಮಾನವೇ.

೮. ನೋಂತೆನು = ವ್ರತವನ್ನು ಮಾಡಿದೆನು.

೯. ಕೆಳೆದಂಪಂ = ಸ್ನೇಹವೆಂಬ ತಂಪನ್ನು. ಅಮರ್ದು = ಅಮೃತ.

೧೦. ಬೀಣೆ = ವೀಣೆ.

೧೧. ಸಂದಿರೆ = ಆದಿಯಿಂದಲೂ ಪ್ರಸಿದ್ಧವಾಗಿರಲು.

೧೩. ಪೊದಿದಿರೆ = ಸೇರಿರಲು. ಅವರ್ತು = ಅವರದು. ಇಂ = ಇನ್ನು. ಎನತುಮೆ = ನನ್ನದೆ. ನಿಸದಂ = ನಿಶ್ಚಯಂ.

೧೫. ನಲ್ಗಬ್ಬ = ಒಳ್ಳೆಯ ಕಾವ್ಯ.

೧೬. ಮುತ್ತುದು = ಮ್ಲಾನಮುಖಿಯಾದುದು. (V. Root ಮುದು = to grow old) (ಬಾಡಿರುವುದು). ಸಗ್ಗ = ಸ್ವರ್ಗ.

೧೭. ಏವುದೊ = ಏನನ್ನು ಮಾಡುವುದೊ. ಕರೆ = ಚಂದ್ರನಲ್ಲಿರುವ ಕಪ್ಪಾದ ಗುರುತು.

೨೦. ಪೊರೆ = ಮನೆ. ಕಾಂತಾರ = ಕಾಡು. ಲೆಂಕ = ಸೇವಕ.

೨೧. ಇನಿಸಾನುಂ = ಸ್ವಲ್ಪವಾದರೂ.

೨೨. ಗಾವಿಲರು = ಮೂಢರು. ನಿರ್ನೆರಂ = ಸುಮ್ಮನೆ.

೨೩. ಬಿಣ್ಪು = ಭಾರ. ತಿರೆಮುಟ್ಟಂ = ನೆಲದವರೆಗೆ. ಪೊಸನೀರ್ವಿಣ್ಪು = ಹೊಸ ನೀರಿನ ಬಿಣ್ಪು.

೨೪. ಸೈದಂ = ಸಜ್ಜನನು. ಒಳರೇ = ಇದ್ದಾರೆಯೇ.

೨೫. ದೈವಸ್ವಂಬೋಲ್ = ದೈವಸ್ವದ ಹಾಗೆ.

೨೬. ಹಿತನೊಡರ್ಚುವಂ = ಹಿತವನ್ನು ಮಾಡುತ್ತಾನೆ. ಬಳಗಂ+ಇಂ+ಪೆರತಂಟೇ.

೨೭. ಮಾಮಃಸಕಂ = ಕೋಪ. ಪುಗುವಾ = ಸುಡುವ (V. root ಪುಗು = to burn).

೨೮. ಕೈದು = ಆಯುಧ. ಶಿಖಿ = ಅಗ್ನಿಜ್ವಾಲೆ. ಚುಂಚುರ್ = ಸುಡು.

೨೯. ಧೀಮಂತರು = ಬುದ್ಧಿವಂತರು. ದೊರೆಯೊ = ಸಮಾನವೊ.

೩೦. ಮಳೆಯಿಂ+ಅವನಿಯುಂ. ಬರಿದೇ = ನಿಷ್ಪ್ರಯೋಜನವಾಗಿ.

೩೧. ಒಲವು = ಪ್ರೀತಿ. ಅರೆಚಣ = ಅರ್ಧಕ್ಷಣ.

೩೩. ಸಾರೆವರುತ್ತೆ = ಸಮೀಪಕ್ಕೆ ಬರುತ್ತೆ.

೩೪. ಎಡರ್ = ಕಷ್ಟ. ಓವಲ್ಕೆ = ರಕ್ಷಿಸಲಿಕ್ಕೆ (V. root ಓ = to protect).

೩೫. ಗಹನಂ = ಸೈದನು.

೩೬. ಎರಕೆ = ಬೇಡಿಕೆ.

೩೭. ಪೈಟೆಗೆಯಿಸು = ಹೋಗಾಡಿಸು. ಒಗೆತರ್ಪ = ಉಂಟಾಗುವ.

೩೯. ಪೊಗರ್ = ಕಾಂತಿ. ಪುಟ್ಟೈಸಿರಿ = ಜನನಕಾಲದಿಂದಲೇ ಬಂದ ಐಶ್ವರ್ಯ.

೪೦. ಕರ್ಚು = ತೊಳೆಯು. ತಿಳಿಯಾಗಿ = ಸ್ವಚ್ಛವಾಗಿ. ಪಳಿಕು = ಸ್ಫಟಿಕ.

೪೧. ರಜವಿಡಿದ = ಧೂಳಿನಿಂದ ಕೂಡಿದ. ಶುಷ್ಕಪತ್ರವ್ರಜಮಂ = ಒಣಗಿದೆಲೆಗಳ ಪೊಕ್ಕಳವನ್ನು. ರಜದಿಂ = ರಜೋಗುಣದಿಂದ.

೪೩. ಅಳಿಪು = ಆಸೆ.

೪೪. ಕೊಂಕಂ = ವಕ್ರತೆಯನ್ನು. ಇಂಗಡಲು = ಸಿಹಿಯಾದ ಕಡಲು, ಪಾಲ್ಗಡಲು.

೪೫. ಇಂಗಡಲಣುಗಿ = ಲಕ್ಷ್ಮಿ.

೪೬. ಸೋಡಂಬಾಡಂ = ಹೆಚ್ಚಾಗಿ.

೪೭. ಇಂದ್ರಿಯಮೃಗ = ಇಂದ್ರಿಯವೆಂಬ ಮೃಗ.

೪೮. ದೋಷಾಹಿಸಂಕುಲಕ್ಕಾವಾಸಂ = ದೋಷಗಳೆಂಬ ಸರ್ಪಗಳ ಸಮೂಹಕ್ಕೆ ವಾಸಸ್ಥಾನವು. ಉದ್ವಾಸಿಪ+ಅಕಾಲದ ಮಳೆ.

೪೯. ಅರಂ = ಧರ್ಮ.

೫೧. ಬಂಚಿಸೆಪಡುವಂ = ವಂಚಿಸಲ್ಪಡುವನು. ಒಳ್ಳಾನಿಸಂ = ಒಳ್ಳೆಯ ಮನುಷ್ಯನು.

೫೨. ಸಮನಿಸಿದ = ಉಂಟಾದ. ಐಸಿರಿ = ಐಶ್ವರ್ಯ. ಪೊಂದಿಪೋಕುಂ = ನಾಶವಾಗುವುದು.

೫೩. ಪುದು = ಸಂಬಂಧ. ಕೆಳೆ = ಸ್ನೇಹ. ಪಾರ್ದ್ದಂ = ಓಡಿಹೋಗುವುದು.

೫೪. ಒಂದಿದುದರಿಂದ = ಪಡೆದುದರಿಂದ.

೫೫. ಬೆರೆ = ಕೂಡು.

೫೬. ಋಜು = ಸನ್ಮಾರ್ಗ.

೫೭. ಕಿನಿಸು = ಮಾತ್ಸರ್ಯ. ಇನಿಸಾನುಂ = ಸ್ವಲ್ಪವಾದರೂ.

೫೮. ಕೇಕರ = ಕಡೆಗಣ್ಣು. ಮೊರಕು = ದರ್ಪಘೂರ್ಣನ ಮಾಡು. (be in trembling oscillation with pride.)

೫೯. ಕಿವಿವಾಗಿಲ್ = ಕಿವಿಯೆಂಬ ಬಾಗಿಲು. ದಪ್ಪ = ದರ್ಪ. ಒಳಗೆ+ಪುಗುಗುಂ = ಒಳಪುಗುಗುಂ.

೬೦. ಜೊನ್ನಂ = ಬೆಳ್ದಿಂಗಳು. ಅವಿತಥಂ = ಸತ್ಯವು.

೬೧. ಪಾಂಗಿಂ = ತೆರದಿಂ.

೬೨. ತುಂಬುಂಬೆರೆ = ಪೂರ್ಣ ಚಂದ್ರ.

೬೪. ಕುಟ್ಟಿಯ = ಅನಾರೋಗ್ಯಕರವಾದ. ಗೇರ್ + ತಂಬಿಟ್ಟು = ಗೇರುಬೀಜದ ಬೆಂಡಿನಿಂದ ಮಾಡಿದ ತಂಬಿಟ್ಟು.

೬೫. ಪುಳಿಲ್ = ಹೊಯಿಗೆ.

೬೬. ನರೆಯಿಲಿ = ನರೆಯಿಲ್ಲದ. ಜರೆಯಿಲಿ = ಜರೆಯಿಲ್ಲದ. ಮಬ್ಬಿಲಿ = ಮಾಂದ್ಯವಿಲ್ಲದ. ಮಣಿಯಿಲಿ = ರತ್ನವಿಲ್ಲದ.

೬೭. ಆಸರ್ = ಬಾಯಾರಿಕೆ. ಒರಕು = ನಿದ್ದೆ.

೭೧. ನಲ್ವರಿಜು = ಮನೋಹರವಾದ ರೂಪು. ಇರ್ಕೆ = ಬಾಳ್ವೆ. ಮುತ್ತುಗಪೂ = ಪಲಾಶವೃಕ್ಷ(ಕಿಂಶುಕ)ದ ಹೂ.

೭೨. ಅರಿತವರ್ = ವಿದ್ವಾಂಸರು. ಅದರಿಂದೆ ಪಿರಿದು = ಅದರತ್ತಣಿಂದೆ ಪಿರಿದು. ಬಿಜ್ಜೆ = ವಿದ್ಯೆ. ಅಸುವಿರ್ಪನ್ನಂ = ಜೀವವಿರುವತನಕ.

೭೩. ಕದಿರ್ = ಕಿರಣ. ಈವಂ = ಕೊಡುವವಂ.

೭೪. ಇನಿವಣ್ಣು = ಸಿಹಿಯಾದ ಹಣ್ಣು. ತಿಳಿವೆಂಬ ಪಣ್ಣು = ಜ್ಞಾನವೆಂಬ ಹಣ್ಣು. ಮಾನಸಂ = ಮನುಷ್ಯ.

೭೫. ಅರಿವು = ಜ್ಞಾನ.

೭೬. ಅಹಿತವ್ರಜ = ವೈರಿಸಮೂಹ.

೭೮. ಅಸುವುಳ್ಳನ್ನೆವರಂ = ಅಸುವಿರ್ಪನ್ನಂ.

೭೯. ಎಡಗರ್ = ಮೂಢರ್. ಒಗೆತರ್ಪ = ಉಂಟಾಗುವ.

೮೦. ನಾಲಗೆಮುದಿ = ನಾಲಗೆಯ ತುದಿ. ಸಿರಿದಾಯ್ಮನೆ = ಐಶ್ವರ್ಯಕ್ಕೆ ತಾಯಿಯ ಮನೆ.

೮೨. ನಲ್ಮಾತು = ಒಳ್ಳೆಯ ಮಾತು.

೮೩. ಕುಡವೇಡಿದುದಿಲ್ಲ = ಕೊಡಬೇಕಾದದ್ದಿಲ್ಲ. ಕೆಲಂಬರ್ = ಕೆಲವರು.

೮೪. ಅದಾನದೋಷ = ದಾನವನ್ನು ಮಾಡದಿರುವ ದೋಷ. ಒಡವುಟ್ಟು = ದರಿದ್ರಜನ್ಮ.

೮೫. ನೂರ್ವರ್ = ನೂರು ಮಂದಿ. ಪಯಿಂಛಾಸಿರ್ವರ್ = ಹತ್ತುಸಾವಿರ ಮಂದಿ.

೮೭. ತಳ್ಕೈಸಲ್ = ಆಲಿಂಗಿಸಿಕೊಳ್ಳಲು.

೮೮. ಮಬುರ್ = ಮಬ್ಬು = ಅಂಧಕಾರ.

೮೯. ಬಗ್ಗಂ = ಹುಲಿ. ತಿರೆ = ಭೂಮಿ.

೯೦. ಅಕಳ್ = ದನ. ನಂಜು = ವಿಷ.

೯೨. ಕಿಚ್ಚುಗ = ಬೆಂಕಿ.

೯೪. ಒಲವು = ಪ್ರೀತಿ. ಸೇರ್ಕೆ = ಸಂಬಂಧ. ಅಲರ್ಚುಗುಂ = ಅರಳುತ್ತದೆ. ಬಿದು
ಗಲ್ = ಚಂದ್ರಕಾಂತೋಪಲ. ಬಿದು = ಚಂದ್ರ.

೯೫. ಒಗೆತರ್ಕುಂ = ಉಂಟಾಗುವವು.

೯೬. ತೀವಿದ = ತುಂಬಿದ. ಧೀರರ್ = ವಿದ್ವಾಂಸರು.

೯೭. ಘನವಾರಿ = ಮೋಡದ ನೀರು.

೯೮. ಮರಣಂಬೊರ್ದುತ್ತೆ = ಮರಣವನ್ನು ಹೊಂದಿ. ಒಗೆತಂದಂ = ಹುಟ್ಟಿದವನು.

೯೯. ವಸನ = ವಸ್ತ್ರ. ವಪು = ಸುಂದರವಾದ ಶರೀರ.

೧೦೧. ವಾಘೆ = ಕಡಿವಾಣದ ಹಗ್ಗ (Reins).

೧೦೨. ವಿನಾನುಂ = ಎಷ್ಟಕ್ಕೂ. ತಗದು = ಆಗದು. ಶುಕ್ತಿ = ಮುತ್ತಿನ ಚಿಪ್ಪು.
ಸ್ವಾತೀ ಮಹಾನಕ್ಷತ್ರದಲ್ಲಿ ಮಳೆನೀರ್ವನಿಗಳು ಮುತ್ತಿನ ಚಿಪ್ಪಿಗೆ ಬಿದ್ದು
ಮುತ್ತುಗಳಾಗುತ್ತವೆ (ಕವಿಸಮಯ).

೧೦೩. ಕೂರದಂ = ಪ್ರೀತಿಸದವಂ, ಮೆಚ್ಚದವನು. ನಲ್ನಾತುಗಂ = ಒಳ್ಳೆಯ ಮಾತು
ಗಳನ್ನಾಡುವವನು.

೧೦೪. ಆಧಿ = ಮನೋರೋಗ.

೧೦೬. ಮಿತ್ತು = ಮಿಳ್ತು = ಮೃತ್ಯು. ನಿಸ್ಪೃಹಂ = ಬಯಕೆಯಿಲ್ಲದವನು.

೧೦೭. ಕಡುಪು = ದುಷ್ಟ ಸ್ವಭಾವ ಉಲಿ = ಹೇಳು. ಫಣಿ = ಸರ್ಪ.

೧೦೮. ಪೇಳ = ಹೇಳು.

೧೦೯. ಶ್ರುತಿದೇವಿ = ಶಾರದೆ. ಅಳ್ತಿ = ಪ್ರೀತಿ, ಆಸಕ್ತಿ. ನುತಸಂಸ್ಕೃತ = ಪ್ರಸಿದ್ಧ
ರಾದ ಕವಿಗಳಿಂದ ಹೊಗಳಲ್ಪಟ್ಟ ಸಂಸ್ಕೃತಸಾಹಿತ್ಯ. ಹಿತವಚನಮಂ = ನೀತಿ
ವಾಕ್ಯಗಳನ್ನು. ತನ್ನನುಡಿಗೆ = ಪ್ರಿಯವಾದ ಕನ್ನಡ ಮಾತಿಗೆ.

೧೧೧. ತೀವಲ್ಕೆ = ತುಂಬಲಿಕ್ಕೆ. ಓವುಗೆ = ಕಾಪಾಡಲಿ ಶುಭದಂ = ಮಂಗಲವನ್ನು
ಕೊಡುವವನು.

PRINTED AT THE DHARMA PRAKASH PRESS, MANGALORE.

ಪರಾಮರ್ಶೆಗಾಗಿ